ದಿನಾಂಕಃ  27.10.2025 ರಂದು  ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಕೆ.ವಿ. ವಕೀಲರಿಂದಃ**

2018-19 ನೇ ಸಾಲಿನಲ್ಲಿ ನಾವು ಕಾಫೀ ಬೆಳೆಯನ್ನು ಬೆಳೆಯುತ್ತಿದ್ದೇವೆ ಎಂದು ತೋರಿಸಲು ನಾವು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಾನು ಪ್ರಕರಣದಲ್ಲಿ ಯಾವ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ಈಗ ನೆನಪಾಗುತ್ತಿಲ್ಲ. ನನ್ನ ಜಮೀನಿಗೆ ಸಂಬಂಧಿಸಿದಂತೆ ನಾನು ಯಾವ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿಯು ವ್ಯಾಪಾರ ಮಾಡುತ್ತಿರುವ ಬಾಬ್ತು ಹಾಜರುಪಡಿಸಿರುವ ದಾಖಲಾತಿಯ ಬಗ್ಗೆ ನನಗೆ ಈಗ ನೆನಪಾಗುತ್ತಿಲ್ಲ. ನನ್ನ ಪರವಾಗಿ ಹಾಜರುಪಡಿಸಿರುವ ದಾಖಲಾತಿಗಳಲ್ಲಿ ಸದರಿ ದಾಖಲಾತಿಯು ಕಂಡುಬರುತ್ತಿಲ್ಲ ಎಂದರೆ ಸರಿ. ಆದ ಕಾರಣ ಆರೋಪಿಯು 2018-19 ನೇ ಸಾಲಿನಲ್ಲಿ ನಮ್ಮಿಂದ ಯಾವುದೇ ಬೆಳೆಯನ್ನು ಖರೀದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರರು ಸೇರಿ ಯಾವ ಅಂಗಡಿಯನ್ನು ನಡೆಸುತ್ತಿದ್ದೇವೆ ಎಂದು ಈಗ ನೆನಪಾಗುತ್ತಿಲ್ಲ. ಭಾಸ್ಕರಗೌಡ, ಭೋಜೇಗೌಡ ಮತ್ತು ಲಕ್ಷಣೇಗೌಡ ಸೇರಿ ಒಂದೇ ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ಅದೇ ರೀತಿ ಸದರಿ ಪ್ರಕರಣದಲ್ಲಿ ಆರೋಪಿಯು ಒಂದೇ ದಿನಾಂಕದ ಚೆಕ್ಕನ್ನು 4 ಜನರಿಗೂ ನೀಡಿರುವುದಾಗಿ ಸಲ್ಲಿಸಿರುತ್ತೇವೆ ಎಂದರೆ ಸರಿ.

ಹಿಂದೆ ರಾಜಿ ಆಗಿರುವಂತಹ ಚೆಕ್ ನ ಸಂಖ್ಯೆ ನೆನಪಾಗುತ್ತಿಲ್ಲ. ಪ್ರಸ್ತುತ ಪ್ರಕರಣದ ಚೆಕ್ ನ್ನು ಯಾವ ದಿನಾಂಕದಂದು ಸ್ವೀಕರಿಸಿಕೊಂಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಸದರಿ ಚೆಕ್ ನ ಸಂಖ್ಯೆ ನೆನಪಾಗುತ್ತಿಲ್ಲ. ಸದರಿ ಚೆಕ್ ಎಸ್.ಬಿ.ಐ. ಬ್ಯಾಂಕ್ ನ ಖಾತೆಗೆ ಸಂಬಂಧಿಸಿದ್ದಾಗಿರುತ್ತದೆ. ಸದರಿ ಚೆಕ್ ಎಸ್.ಬಿ.ಐ. ನ ಯಾವ ಶಾಖೆಗೆ ಸೇರಿದ್ದಾಗಿರುತ್ತದೆ ಎಂದು ನೆನಪಾಗುತ್ತಿಲ್ಲ. ಸದರಿ ಚೆಕ್ ನ್ನು ಯಾವ ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಸದರಿ ಚೆಕ್ ನ್ನು ಯಾವ ದಿನಾಂಕದಂದು ನಗದೀಕರಣಕ್ಕಾಗಿ ಹಾಜರುಪಡಿಸಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಅದೇ ರೀತಿ ಯಾವ ದಿನ ಹಿಂಬರಹ ಪಡೆದುಕೊಂಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಆರೋಪಿಯು 4 ಜನಕ್ಕೂ ಎಸ್.ಬಿ.ಐ. ಬ್ಯಾಂಕ್ ನ ಚೆಕ್ ಕೊಟ್ಟಿರುವ ಬಗ್ಗೆ ನೆನಪಾಗುತ್ತಿಲ್ಲ. ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ ನ್ನು ಆರೋಪಿಯಿಂದ ಅಕ್ರಮವಾಗಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಹಿಂಬರಹವನ್ನು ಏನೆಂದು ನೀಡಲಾಗಿತ್ತು ಎಂದು ನೆನಪಾಗುತ್ತಿಲ್ಲ. ನಾನು ಹಿಂಬರಹವನ್ನು ಪಡೆದ ನಂತರ ವಕೀಲರ ಮುಖಾಂತರ ಆರೋಪಿಗೆ ನೋಟೀಸನ್ನು ನೀಡಿರುವ ಬಗ್ಗೆಯೂ ಮತ್ತು ಅದರ ದಿನಾಂಕ ನೆನಪಾಗುತ್ತಿಲ್ಲ. ವಕೀಲರ ಮುಖಾಂತರ ನೀಡಿದ ನೋಟೀಸ್ ಜಾರಿಯಾದ ದಿನಾಂಕ ನೆನಪಾಗುತ್ತಿಲ್ಲ.

ನಾನು ಆರೋಪಿಗೆ ಯಾವುದೆ ನೋಟೀಸ್ ನೀಡಿರುವುದಿಲ್ಲ ಮತ್ತು ಅದು ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಎಸ್.ಬಿ.ಐ. ಚೆಕ್ ನ್ನು ಹೊರತುಪಡಿಸಿ

ಇತರೆ ಚೆಕ್ ನ್ನು ನೀಡಿರುವ ಬಗ್ಗೆ ನೆನಪಾಗುತ್ತಿಲ್ಲ. ಆರೋಪಿಗೆ ಒತ್ತಡ ನೀಡಿ 4 ಜನರೂ ನ್ಯಾಯಾಲಯದ ಮುಖಾಂತರ ಚೆಕ್ ನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಸ್ವ ಇಚ್ಚೆಯಿಂದ ನ್ಯಾಯಾಲಯದ ಮುಂದೆ ಚೆಕ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 2018-19 ನೇ ಸಾಲಿನಲ್ಲಿ ಆರೋಪಿಗೆ ನಾನು ಎಷ್ಟು ಕಾಫೀ, ಮೆಣಸು ಮತ್ತು ಅಡಿಕೆ ಬೆಳೆಯನ್ನು ಮಾರಾಟ ಮಾಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಸದರಿ ಸಮಯದಲ್ಲಿ ಸದರಿ ಬೆಳೆಗಳಿಗೆ ಎಷ್ಟು ಬೆಲೆ ಇತ್ತು ಎಂದು ನೆನಪಾಗುತ್ತಿಲ್ಲ. ಈ ಪೂರ್ವದಲ್ಲಿ ಆರೋಪಿಯ ವಿರುದ್ಧ ದಾಖಲು ಮಾಡಿದ್ದ ಪ್ರಕರಣದಲ್ಲಿ ಸಹಿಯು ವ್ಯತ್ಯಾಸ ಬರುತ್ತಿದ್ದ ಕಾರಣ ಹಿಂಪಡೆಯಲಾಗಿತ್ತು ಎಂದರೆ ಸರಿಯಲ್ಲ. ನಾನು ಪ್ರಸ್ತುತ ಪ್ರಕರಣದಲ್ಲಿ ಕೇಳಿರುವ ಮೊತ್ತವನ್ನು ಕಾನೂನಾತ್ಮಕವಾಗಿ ಪಡೆದುಕೊಳ್ಳುವಂತಹ ಮೊತ್ತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ವಾಸಿಸಲು ಮನೆ ಇಲ್ಲದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಆರೋಪಿಯು ಯಾವುದೇ ಆದಾಯ ಹೊಂದಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ನಮ್ಮೊಟ್ಟಿಗೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ ಮತ್ತು ಅವರು ವ್ಯವಹಾರ ಮಾಡುವಷ್ಟು ಶಕ್ತರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ಪ್ರಸ್ತುತ ಪ್ರಕರಣವನ್ನು ಆರೋಪಿಯ ವಿರುದ್ಧ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ನಾವು ಸಹೋದರರು ಸೇರಿ ದುರುದ್ದೇಶದಿಂದ ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಯನ್ನು ಪ್ರಸ್ತುತ ಪ್ರಕರಣಕ್ಕಾಗಿ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.